ದಿ: 11-06-2019 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

ಮುಂದುವರೆದ ಪಾಟೀ ಸವಾಲು : ಶ್ರೀ ಎಂ.ಎಸ್.ಎಸ್. ವಕೀಲರಿಂದ :-

9. ನಾವು ಮತ್ತು 2 ನೇ ಪ್ರತಿವಾದಿಯ ಮಕ್ಕಳು ಚೆನ್ನಾಗಿರುತ್ತೇವೆ. ನಿಡಿ-56 ರ ಪಾರಿಕತ್ತು 2 ನೇ ಪ್ರತಿವಾದಿಯ ಬಳಿ ಇದೆಯಾ ಅಂದರೆ ಸಾಕ್ಷಿ ಇರಬಹುದು, ನನಗೆ ಗೊತ್ತಿಲ್ಲ ಅಂತ ನುಡಿಯುತ್ತಾರೆ. ಸದರಿ ಪಾರಿಕತ್ತಿನ ಬಗ್ಗೆ ನಾನು ಪ್ರತಿವಾದಿ 2(ಎ) ರವರನ್ನು ವಿಚಾರಿಸಿರುವುದಿಲ್ಲ. ಬೋಗಪ್ಪ 1975 ರಲ್ಲಿ ಮರಣ ಹೊಂದಿರುತ್ತಾರೆ. ಆ ಬಗ್ಗೆ ಮರಣ ಪ್ರಮಾಣ ಪತ್ರ ಇರುವುದಿಲ್ಲ. ಸದರಿ ಬೋಗಪ್ಪ ಮೃತಪಟ್ಟಾಗ ಸುಮಾರು 60-65 ವರ್ಷ ಆಗಿತ್ತು. ಅವರನ್ನು ಆಸ್ಪತ್ರೆಗೆ ಕಾಯಿಲೆ ಬಿದ್ದಾಗ ಕರೆದುಕೊಂಡು ಹೋಗಿ ಚಿಕಿತ್ಸೆ ಕೊಡಿಸಲಾಗಿರುತ್ತದೆ. ಆ ಬಗ್ಗೆ ದಾಖಲೆ ನನ್ನ ಬಳಿ ಲಭ್ಯವಿರುವುದಿಲ್ಲ. ಯಾರ ಬಳಿ ಆ ದಾಖಲೆ ಇರುತ್ತದೆ ಎಂದು ನನಗೆ ಗೊತ್ತಿಲ್ಲ. ಸದರಿ ಬೋಗಪ್ಪನಿಗೆ ಯಾವ ಕಾಯಿಲೆ ಆಗಿತ್ತು ಎಂದು ನನಗೆ ಗೊತ್ತಿಲ್ಲ, ಆದರೆ ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದರು ಎನ್ನುವ ವಿಚಾರ ತಿಳಿದಿರುತ್ತದೆ. ಅವರನ್ನು ಹುಬ್ಬಳ್ಳಿಯ ಆಸ್ಪತ್ರೆಗೆ ಕರೆದುಕೊಂಡು ಹೋಗಿ ಚಿಕಿತ್ಸೆ ಕೊಡಿಸಲಾಗಿತ್ತು. ಹುಬ್ಬಳ್ಳಿ ಆಸ್ಪತ್ರೆಯಿಂದ ಬಂದ ಒಂದುವರೆ ವರ್ಷಗಳ ನಂತರ ಮರಣ ಹೊಂದಿರುತ್ತಾರೆ.

10. ಸದರಿ ಬೋಗಪ್ಪನವರು ಕಾಯಿಲೆಯಿಂದ ಸುಮಾರು 2-3 ವರ್ಷ ನರಳಾಡಿದ್ದರು. ಆ ರೀತಿಯಾಗಿ ಅವರು ಕಾಯಿಲೆಯಿಂದ 2-3 ವರ್ಷ ನರಳಾಡುತ್ತಿದ್ದರಿಂದ ಅವರ ಮಾನಸಿಕ ಸ್ಥಿತಿ ಸರಿ ಇರಲಿಲ್ಲ ಅಂದರೆ ಸರಿಯಲ್ಲ. ಅವರು ಕಾಯಿಲೆಯಿಂದ ನರಳಾಡುತ್ತಿದ್ದರಿಂದ ಒಬ್ಬರೇ ತಿರುಗಾಡುವ ಸ್ಥಿತಿಯಲ್ಲಿರಲಿಲ್ಲ ಅಂದರೆ ಸರಿಯಲ್ಲ. ಸದರಿ ಬೋಗಪ್ಪ ಮೃತಪಟ್ಟಾಗ ನನಗೆ ಸುಮಾರು 12-13 ವರ್ಷ ವಯಸ್ಸಾಗಿತ್ತು. ಆ ಸಮಯದಲ್ಲಿ ನಮ್ಮ ಮನೆಯ ಯಜಮಾನಿಕೆಯನ್ನು ನಮ್ಮ ತಂದೆ ಮಾಡುತ್ತಿದ್ದರು. ವಿಲ್ ಬರೆದರು ಎಂದು ಹೇಳಲಾದ ಸಮಯದಲ್ಲಿ ಯಾರು ಯಾರು ಬಂದಿದ್ದರು ಎಂದು ನನಗೆ ಗೊತ್ತಿಲ್ಲ. ಸದರಿ ವಿಲ್ ವಿಚಾರ ನನಗಿಂತ ನನ್ನ ತಂದೆಗೆ ಚೆನ್ನಾಗಿ ತಿಳಿದಿರುತ್ತದೆ ಅಂದರೆ ಅವರಿಗೂ ಗೊತ್ತಿರಬಹುದು ಅಂತ ನುಡಿಯುತ್ತಾರೆ. ನಮ್ಮ ತಂದೆಯೊಂದಿಗೆ ಸದರಿ ವಿಲ್ ವಿಚಾರವನ್ನು ನಾನು ಮಾತನಾಡಿರುತ್ತೇನೆ.

11. ಎಷ್ಟು ಆಸ್ತಿಗಳನ್ನು ವಿಲ್ ನಲ್ಲಿ ಸೇರಿಸಲಾಗಿದೆ ಎಂದು ದಾಖಲೆಯನ್ನು ನೋಡದೇ ನನಗೆ ಹೇಳಲು ಆಗುವುದಿಲ್ಲ. ವಿಲ್ ಬರೆದರು ಎಂದು ಹೇಳಲಾದ ಸಮಯದಲ್ಲಿ ಸದರಿ ಬೋಗಪ್ಪ ನಮ್ಮ ಮನೆಯಲ್ಲಿ ಮತ್ತು ನಮ್ಮ ಚಿಕ್ಕಪ್ಪನ ಮನೆಯಲ್ಲಿ ಇರುತ್ತಿದ್ದರು. ಬೋಗಪ್ಪನಿಗೆ ಬೇರೆ ಪ್ರತ್ಯೇಕವಾಗಿ ಮನೆ ಇತ್ತೋ ಇಲ್ಲವೋ ನನಗೆ ಗೊತ್ತಿಲ್ಲ. ಸದರಿ ಬೋಗಪ್ಪ ನಮ್ಮ ಮನೆಯಲ್ಲಿ ಮತ್ತು ನಮ್ಮ ಚಿಕ್ಕಪ್ಪನ ಮನೆಯನ್ನು ಬಿಟ್ಟು ಬೇರೆ ಎಲ್ಲೂ ವಾಸವಾಗಿರಲಿಲ್ಲ. ಬೋಗಪ್ಪ ಸತ್ತ ಎಷ್ಟು ದಿನಗಳ ನಂತರ ವಿಲ್ ವಿಚಾರ ನನಗೆ ತಿಳಿಯಿತು ಎಂದು ನನಗೆ ನೆನಪಿಲ್ಲ. ಮಾಚೇನಹಳ್ಳಿ

ಕರಿಯಪ್ಪ, ಅವರ ಹೆಂಡತಿ ಇಂದ್ರಮ್ಮ ನವರ ಮೂಲಕ ವಿಲ್ ವಿಚಾರ ನನಗೆ ತಿಳಿಯಿತು. ವಿಲ್ ಮೂಲ ಪತ್ರ ನಮ್ಮ ಚಿಕ್ಕಪ್ಪನವರ ಬಳಿ ಇತ್ತು. ಬೋಗಪ್ಪನವರು ಹೊಸದುರ್ಗ ಪಟ್ಟಣಕ್ಕೆ ಅಥವಾ ಬೇರೆಯಲ್ಲಿಯಾದರೂ ಹೋದಾಗ ನಮಗೆ ಮತ್ತು ನಮ್ಮ ಚಿಕ್ಕಪ್ಪನವರಿಗೆ ತಿಳಿಯುತ್ತಿತ್ತು ಅಂದರೆ ಇರಬಹುದು, ಆದರೆ ನಾನು ಚಿಕ್ಕಹುಡುಗನಾಗಿದ್ದರಿಂದ ನನಗೆ ಸರಿಯಾಗಿ ನೆನಪಿಲ್ಲ ಅಂತ ನುಡಿಯುತ್ತಾರೆ. 1974 ರಲ್ಲಿ ನನಗೆ 21-22 ವರ್ಷ ಆಗಿತ್ತು ಅಂದರೆ ಸರಿಯಲ್ಲ. ವಿಲ್ ಬರೆದುಕೊಟ್ಟಿದ್ದರು ಎನ್ನಲಾದ ದಿನದಂದು ನಮ್ಮ ಮನೆಯಿಂದ ಮತ್ತು ನಮ್ಮ ಚಿಕ್ಕಪ್ಪನ ಮನೆಯಿಂದ ಯಾರು ಹೋಗಿದ್ದರು ಎಂದು ನನಗೆ ಗೊತ್ತಿಲ್ಲ.

12. ವಿಲ್ ನ್ನು ಎಲ್ಲಿ ಬರೆಸಿದ್ದರು, ಯಾರು ಬರೆದರು ಎಂದು ನನಗೆ ಗೊತ್ತಿಲ್ಲ, ವಿಲ್ಲನ್ನು ನೋಡಿದ ಬಳಿಕ ನನಗೆ ತಿಳಿಯಿತು. ವಿಲ್ ಬಗ್ಗೆ ತಿಳಿದ ನಂತರ ಬೋಗಪ್ಪ ಸದರಿ ಆಸ್ತಿಗಳನ್ನು ನನಗೆ ವಿಲ್ ಮಾಡಿರುತ್ತಾರೆ ಎಂದು ನ್ಯಾಯಾಲಯಕ್ಕೆ ನಾವು ಯಾವುದೇ ಅರ್ಜಿಯನ್ನು ಸಲ್ಲಿಸಿರುವುದಿಲ್ಲ. ವಿಲ್ ನಲ್ಲಿ ನಮೂದಾಗಿರುವ ಸ್ವತ್ತುಗಳು ಅವರಿಗೆ ಹೇಗೆ ಬಂದುವು ಎನ್ನುವ ಬಗ್ಗೆ ದಾಖಲೆ ಇರುವುದಿಲ್ಲ ಅಂದರೆ ನನ್ನ ಬಳಿ ಇರುವುದಿಲ್ಲ ಅಂತ ನುಡಿಯುತ್ತಾರೆ. ರಿ.ಸ.ನಂ.257 ರ 1 ಎಕರೆ 20 ಗುಂಟೆ ಜಮೀನು ಸದರಿ ಬೋಗಪ್ಪನ ಹೆಸರಿನಲ್ಲಿ 1975 ರಿಂದಲೂ ಬರುತ್ತಿದೆ ಅಂದರೆ ಸಾಕ್ಷಿಯು ಆ ಜಮೀನು ನಮಗೆ ಸೇರಿರುವುದಿಲ್ಲ ಅಂತ ನುಡಿಯುತ್ತಾರೆ. ಸದರಿ ಜಮೀನಿಗೂ ನಮಗೂ ಸಂಬಂಧವಿರುವುದಿಲ್ಲ. ಐಟಂ ನಂ.45 ರ ಸ್ವತ್ತು ಬೋಗಪ್ಪನ ಹೆಸರಿನಲ್ಲಿ ಇರುತ್ತದೆ ಅಂದರೆ ಸರಿ. ಸದರಿ ಸ್ವತ್ತು ವಿಲ್ ನಲ್ಲಿ ಸೇರಿರುವುದಿಲ್ಲ ಅಂದರೆ ಸರಿಯಲ್ಲ. ಐಟಂ ನಂ.66 ಬೋಗಪ್ಪನಿಗೆ ಸೇರಿ ಸ್ವತ್ತಾಗಿರುತ್ತದೆ ಅಂದರೆ ಸರಿ. ಸದಿರ ಮೇಲೆ ಹೇಳಿದ 03 ಆಸ್ತಿಗಳು ವಿಲ್ ನಲ್ಲಿ ಇರುವುದಿಲ್ಲ ಅಂದರೆ ಸರಿಯಲ್ಲ.

13. ಕೆ.ಕೆ. ಹಟ್ಟಿ ಗ್ರಾಮದ ಮನೆಗಳು ವಿಲ್ ನಲ್ಲಿ ಸೇರಿರುವುದಿಲ್ಲ ಅಂದರೆ ಅವುಗಳನ್ನು ನಮ್ಮ ತಂದೆ ಭಾಗ ಆದ ನಂತರ ಕಟ್ಟಿಸಿದ್ದರು ಅಂತ ನುಡಿಯುತ್ತಾರೆ. ಬೋಗಪ್ಪನಿಗೆ ಪಾಲು ವಿಭಾಗದಲ್ಲಿ ಮನೆ ಬಂದಿತ್ತೋ, ಇಲ್ಲವೋ ನನಗೆ ಗೊತ್ತಿಲ್ಲ. ಸದರಿ ವಿಚಾರವನ್ನು ನಮ್ಮ ತಂದೆಯವರಿಂದ ನಾನು ಕೇಳಿ ತಿಳಿದುಕೊಂಡಿರುವುದಿಲ್ಲ. ಐಟಂ ನಂ.60 ಬೋಗಪ್ಪನಿಗೆ ಸೇರಿದ ಆಸ್ತಿ ಅಂದರೆ ಸರಿಯಲ್ಲ. ಸದರಿ ಆಸ್ತಿ ಅವರ ಹೆಸರಿನಲ್ಲಿ ಇದೆ ಅಂದರೆ ಸರಿಯಲ್ಲ. ಸದರಿ ಆಸ್ತಿಯನ್ನು ವಿಲ್ ನಲ್ಲಿ ತೋರಿಸಿರುವುದಿಲ್ಲ. ಐಟಂ ನಂ.60 ರ ಸ್ವತ್ತು 2 ನೇ ಪ್ರತಿವಾದಿಯ ಮಗ ಕೃಷ್ಣಮೂರ್ತಿ ಸುಪರ್ದಿನಲ್ಲಿದ್ದು, ತನ್ನ ತಂಗಿ ಕಮಲಮ್ಮನವರಿಗೆ ವಾಸಕ್ಕೆ ಬಿಟ್ಟುಕೊಟ್ಟಿರುತ್ತಾರೆ. ರಿ.ಸ.ನಂ.256/3 ರಲ್ಲಿ 4 ಎಕರೆ 11 ಗುಂಟೆ ಜಮೀನು ಹನುಮಣ್ಣ ಬಿನ್ ಕರೇಮಲ್ಲಣ್ಣನ ಖಾತೆಯಲ್ಲಿದ್ದ ಜಮೀನು ಅಂದರೆ ಸಾಕ್ಷಿಯು ಆ ಜಮೀನಿಗೂ ಈ ದಾವೆಗೂ ಸಂಬಂಧವಿಲ್ಲ ಅಂತ ನುಡಿಯುತ್ತಾರೆ. ಸದರಿ ಸ್ವತ್ತನ್ನು ವಿಲ್ ನಲ್ಲಿ ನಮೂದಿಸಲಾಗಿದೆ ಅಂದರೆ ಸರಿಯಲ್ಲ. ಸದರಿ

ಆಸ್ತಿಗೂ ಬೋಗಪ್ಪನಿಗೂ ಸಂಬಂಧ ಇದೆಯೋ, ಇಲ್ಲವ್ರೋ ನನಗೆ ಗೊತ್ತಿಲ್ಲ. ಸದರಿ ಜಮೀನಿನಲ್ಲಿ ಯಾರು ಸ್ವಾಧೀನದಲ್ಲಿರುತ್ತಾರೆ ಎಂದು ನನಗೆ ಗೊತ್ತಿಲ್ಲ.

14. ಮಳಲಿ ಗ್ರಾಮದ ರಿ.ಸ.ನಂ.259 ರ 3 ಎಕರೆ 29 ಗುಂಟೆ ಜಮೀನು ಪಟ್ಟಾಭಿರಾಮಭಟ್ಟ ರವರ ಹೆಸರಿನಲ್ಲಿ ಇರುತ್ತದೆ ಅಂದರೆ ನನಗೆ ಗೊತ್ತಿಲ್ಲ. ಸದರಿ ಜಮೀನನ್ನು ವಿಲ್ ನಲ್ಲಿ ನಮೂದಿಸಲಾಗಿದೆ ಅಂದರೆ ಸರಿಯಲ್ಲ. ರಿ.ಸ.ನಂ.260 ರ 1 ಎಕರೆ 31 ಗುಂಟೆ ಜಮೀನು ರಂಗಪ್ಪನ ಹೆಸರಿನಲ್ಲಿದೆ ಅಂದರೆ ಸರಿಯಲ್ಲ, ಸಾಕ್ಷಿ ಸ್ವತಃ ರಂಗಪ್ಪನ ಸ್ವಾಧೀನದಲ್ಲಿರುತ್ತದೆ ಮತ್ತು ಖಾತೆ ನಮ್ಮ ತಂದೆ ಹನುಮಂತಪ್ಪ ಹಾಗೂ ಚಿಕ್ಕಪ್ಪ ಸಣ್ಣತಿಮ್ಮಪ್ಪನವರ ಹೆಸರಿನಲ್ಲಿರುತ್ತದೆ. ನಮ್ಮ ತಂದೆ ಹಾಗೂ ಚಿಕ್ಕಪ್ಪನ ಹೆಸರಿಗೆ ಬರುವ ಪೂರ್ವದಲ್ಲಿ ಸದರಿ ಜಮೀನಿನ ಖಾತೆ ಬೋಗಪ್ಪನ ಹೆಸರಿನಲ್ಲಿತ್ತು. ಕ್ಯಾದಿಗೆರೆ ಗ್ರಾಮದ ರಿ.ಸ.ನಂ.20/2 ರ 1 ಎಕರೆ 29 ಗುಂಟೆ ಜಮೀನು ನಾಗಪ್ಪ ಬಿನ್ ಸಿದ್ದಪ್ಪನವರ ಹೆಸರಿನಲ್ಲಿದೆ ಅಂದರೆ ನನಗೆ ಗೊತ್ತಿಲ್ಲ. ಸಾಕ್ಷಿ ಸ್ವತಃ ಸದರಿ ಜಮೀನಿನ ಪೈಕಿ 1 ಎಕರೆ 1 ಗುಂಟೆ ರಾಮಪ್ಪ ಮತ್ತು ಕರಿಯಪ್ಪನ ಹೆಸರಿನಲ್ಲಿ ಉಳಿದ ಜಮೀನು ನಮ್ಮ ತಂದೆ ಹಾಗೂ ಚಿಕ್ಕಪ್ಪನ ಹೆಸರಿನಲ್ಲಿರುತ್ತದೆ. ಸದರಿ ರಾಮಪ್ಪ ಅಂದರೆ ನಾನು, ಕರಿಯಪ್ಪ ಅಂದರೆ ನನ್ನ ಅಣ್ಣ ಅಂದರೆ ಸರಿ. ಸದರಿ ಜಮೀನು 1974 ನೇ ಸಾಲಿನಲ್ಲಿ ಬೋಗಪ್ಪನ ಹೆಸರಿನಲ್ಲಿ ಇರಲಿಲ್ಲ ಅಂದರೆ ಸರಿಯಲ್ಲ. ಸದರಿ ಜಮೀನು 1974 ರಲ್ಲಿ ಬೋಗಪ್ಪನ ಹೆಸರಿಲ್ಲಿ ಇತ್ತು ಎಂದು ತೋರಿಸಲು ದಾಖಲೆಯನ್ನು ಹಾಜರುಪಡಿಸಿರುವುದಿಲ್ಲ.

15. ಚನ್ನಸಮುದ್ರ ಗ್ರಾಮದ ರಿ.ಸ.ನಂ.36/2 ರ 2 ಎಕರೆ 5 ಗುಂಟೆ ಜಮೀನು ಬೋಗಪ್ಪ ಬಿನ್ ಬಂಡಿ ತಿಮ್ಮಣ್ಣನವರ ಹೆಸರಿನಲ್ಲಿತ್ತು ಅಂದರೆ ನನಗೆ ಗೊತ್ತಿಲ್ಲ. ಸದರಿ ಜಮೀನು ವಾದಿಯರ ತಂದೆ ಬೋಗಪ್ಪನಿಗೆ ಸೇರಿತ್ತು. ಸದರಿ ಜಮೀನು ವಾದಿಯರ ತಂದೆಗೆ ಸೇರಿತ್ತು ಎಂದು ತೋರಿಸಲು ದಾಖಲೆಯನ್ನು ಹಾಜರುಪಡಿಸಿರುವುದಿಲ್ಲ. ಪೀಲಾಪುರ ಗ್ರಾಮದ ರಿಸ.ನಂ.25/6 ರ 1 ಎಕರೆ 20 ಗುಂಟೆ ಜಮೀನು 1974-75 ರಲ್ಲಿ ಯಾರ ಹೆಸರಿನಲ್ಲಿ ಇತ್ತು ಎಂದು ನನಗೆ ಗೊತ್ತಿಲ್ಲ. ಸದರಿ ಜಮೀನು ನಮ್ಮ ಸ್ವಾಧೀನದಲ್ಲಿ ಇರುತ್ತದೆ. ಬೋಕಿಕೆರೆ ಗ್ರಾಮದ ರಿ.ಸ.ನಂ.86/2 ರಲ್ಲಿ 2 ಎಕರೆ ಜಮೀನು 1974-75 ನೇ ಸಾಲಿನಲ್ಲಿ ಸಣ್ಣತಿಮ್ಮಪ್ಪ ಬಿನ್ ಬೋಗಪ್ಪನವರ ಹೆಸರಿನಲ್ಲಿತ್ತು ಅಂದರೆ ಸರಿ. ಬೋಕಿಕೆರೆ ಗ್ರಾಮದ ರಿ.ಸನಂ.45/1 ರಲ್ಲಿ 30 ಗುಂಟೆ ಜಮೀನು 2 ನೇ ಪ್ರತಿವಾದಿರವರ ಹೆಸರಿನಲ್ಲಿತ್ತು. ಸದರಿ ಮೇಲೆ ಹೇಳಿದ 02 ಜಮೀನುಗಳು ಬೋಗಪ್ಪನಿಗೆ ಸಂಬಂಧಪಟ್ಟಿರುವುದಿಲ್ಲ ಅಂದರೆ ನನಗೆ ಗೊತ್ತಿಲ್ಲ. ರಿಸ.ನಂ.86/2 ರ 2 ಎಕರೆ ಜಮೀನನ್ನು ಕೆಲ್ಲೋಡಿನ ವಿ.ಎಸ್.ಎಸ್.ಎನ್. ಗೆ ಆಧಾರ ಮಾಡಿ ಸಾಲ ಪಡೆಯಲಾಗಿದೆ ಅಂದರೆ ನನಗೆ ಗೊತ್ತಿಲ್ಲ. ರಿ.ನಂ.86/2 ರ 2 ಎಕರೆ ಜಮೀನು 1 ನೇ ವಾದಿಯ ಸ್ವಾದೀನದಲ್ಲಿ ಮತ್ತು ರಿ.ಸನಂ.45/1 ರ 30 ಗುಂಟೆ ಜಮೀನು 2 ನೇ ಪ್ರತಿವಾದಿಯ ಮಕ್ಕಳ ಸ್ವಾಧೀನದಲ್ಲಿರುತ್ತದೆ. ರಿಸ.ನಂ.86/2 ರ 2 ಎಕರೆ ಜಮೀನನ್ನು 2 ನೇ ಪ್ರತಿವಾದಿಯಯ ಮಕ್ಕಳಿಗೆ ಖಾತೆಯಾಗಿದೆ ಅಂದರೆ ನನಗೆ ಗೊತ್ತಿಲ್ಲ. ವಾದಿಯರ ಹೆಸರಿನಲ್ಲಿ ಯಾವುದೇ ಜಮೀನಿನ ಖಾತೆ ಆಗಿರುವುದಿಲ್ಲ ಅಂದರೆ ಸರಿ.

16. ದಿ: 30-12-1974 ರಲ್ಲಿ ಬೋಗಪ್ಪ ಮತ್ತು ಹನುಮಂತಪ್ಪ ಹಾಗೂ ಸಣ್ಣ ತಿಮ್ಮಪ್ಪ ಒಟ್ಟು ಕುಟುಂಬದಲ್ಲಿ ಇರಲಿಲ್ಲ, ಬೋಗಪ್ಪ ನಮ್ಮ ಮನೆ ಹಾಗೂ ಚಿಕ್ಕಪ್ಪನ ಮನೆಯಲ್ಲಿ ಊಟ ಹಾಗೂ ಇತರೆ ಸೌಲಭ್ಯಗಳಿಗಾಗಿ ಸೇರಿಕೊಂಡಿದ್ದರು. ವಾದಿಯರ ಮೇಲೆ ಬೋಗಪ್ಪನಿಗೆ ವಿಶ್ವಾಸ ಇತ್ತು ಮತ್ತು ವಾದಿಯರು ಬಂದು ಹೋಗುವುದು ಮಾಡುತ್ತಿದ್ದರು ಅಂದರೆ ಸರಿ. ಬೋಗಪ್ಪ ಕಾಯಿಲೆಯಿಂದ ಬಳಲುತ್ತಿದ್ದ ಅವಧಿಯಲ್ಲಿ ಬೋಗಪ್ಪ ಹಾಗೂ ಆತನ ಇಬ್ಬರು ಸಹೋದರರು ಕುಟುಂಬದ ಸ್ವತ್ತುಗಳನ್ನು ಒಟ್ಟಿಗೆ ಅನುಭವಿಸುತ್ತಿದ್ದರು ಅಂದರೆ ಸಾಕ್ಷಿ ಇರಬಹುದು ನನಗೆ ಸರಿಯಾಗಿ ಗೊತ್ತಿಲ್ಲ ಅಂತ ನುಡಿಯುತ್ತಾರೆ. ವಿಲ್ ನಲ್ಲಿ ಬರೆದಿರುವ ವಿಚಾರ ನನಗೆ ಸರಿಯಾಗಿ ಗೊತ್ತಿಲ್ಲ ಅಂದರೆ ಸಾಕ್ಷಿಯು ವಿಲ್ ನಲ್ಲಿ ಬರೆದಿರುವ ಕನ್ನಡ ನನಗೆ ಸರಿಯಾಗಿ ಓದಲು ಬರುವುದಿಲ್ಲ ಅಂತ ನುಡಿಯುತ್ತಾರೆ. ವಿಲ್ ನಲ್ಲಿರುವ ವಿಚಾರವನ್ನು ನನ್ನ ಅಣ್ಣ ಕರಿಯಪ್ಪನ ಮೂಲಕ ಓದಿಸಿ ತಿಳಿದುಕೊಂಡಿದ್ದೆನು. ವಿಲ್ ನ್ನು ನನಗೆ ನಮ್ಮ ಅಣ್ಣ ಕರಿಯಪ್ಪ ಕೊಟ್ಟರು. ತಕರಾರನ್ನು ಸಲ್ಲಿಸುವ ಸಮಯದಲ್ಲಿ ವಿಲ್ ನಲ್ಲಿ ನಮೂದಿಸಿರುವ ಆಸ್ತಿಗಳ ವಿಚಾರಗಳನ್ನು ವಕೀಲರಿಂದ ಓದಿಸಿ, ಕೇಳಿ ತಿಳಿದುಕೊಂಡಿದ್ದೀರಾ ಎಂದರೆ ಸಾಕ್ಷಿಯು ಬಹಳ ವರ್ಷಗಳಾಗಿರುವುದರಿಂದ ನೆನಪಿಲ್ಲ ಅಂತ ನುಡಿಯುತ್ತಾರೆ. ಬೋಗಪ್ಪ ಮರಣ ಶಾಸನವನ್ನು ಬರೆದುಕೊಟ್ಟಿದ್ದಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಅಂದರೆ ಸರಿಯಲ್ಲ. ವಿಲ್ ನ್ನು ಬರೆದರು ಎಂದು ಹೇಳಲಾದ ದಿನಾಂಕದ ನಂತರ 6 ತಿಂಗಳು ವರ್ಷದ ಒಳಗೆ ಬೋಗಪ್ಪ ತೀರಿಕೊಂಡಿರುತ್ತಾರೆ. ಬೋಗಪ್ಪನವರು 1975 ರ ಮಾರ್ಚ್ ತಿಂಗಳಲ್ಲಿ ಮೃತಪಟ್ಟಿರುತ್ತಾರೆ ಅಂದರೆ ಇರಬಹುದು. ಅವರು ಮರಣ ಹೊಂದುವ 6 ತಿಂಗಳ ಹಿಂದಿನಿಂದ ಅವರ ಕಾಯಿಲೆ ಉಲ್ಬಣ ಗೊಂಡಿತ್ತು ಅಂದರೆ ಸರಿಯಲ್ಲ. ಕಾಯಿಲೆ ಉಲ್ಬಣಗೊಂಡು ತಾನು ಏನು ಮಾಡುತ್ತಿದ್ದೇನೆ ಎಂದು ತಿಳಿಯದ ಸ್ಥಿತಿಯಲ್ಲಿ ಅವರು ಇದ್ದರು ಅಂದರೆ ಸರಿಯಲ್ಲ.

17. ವಿಲ್ ಗೆ 1 ನೇ ವಾದಿ ಸಹಿ ಮಾಡಿಲ್ಲ, 2 ನೇ ವಾದಿ ಹೆಬ್ಬೆಟ್ಟಿನ ಗುರುತನ್ನು ಹಾಕಿಲ್ಲ ಅಂದರೆ ಸರಿಯಲ್ಲ. ವಿಲ್ ನಲ್ಲಿ ಬೋಗಪ್ಪನಿಗೆ ಸೇರಿರದ ಸ್ವತ್ತುಗಳನ್ನು ಸೇರಿಸಿಕೊಳ್ಳಲಾಗಿದೆ ಅಂದರೆ ಸರಿಯಲ್ಲ. ವಾದಿಯರು ಹೆಣ್ಣುಮಕ್ಕಳಿದ್ದು, ಅವರಿಗೆ ತಿಳುವಳಿಕೆ ಇರದ ಕಾರಣ ನಾನು 22 ವರ್ಷದ ಯುವಕನಿದ್ದು, ಬುದ್ಧಿವಂತನಿದ್ದರಿಂದ ವಿಲ್ ನ್ನು ಸೃಷ್ಟಿಸಿರುತ್ತೇನೆ ಅಂದರೆ ಸರಿಯಲ್ಲ. ವಿಲ್ ನ್ನು ಸೃಷ್ಟಿಸಿರುವುದರಿಂದಲೇ ಬೋಗಪ್ಪನಿಗೆ ಸೇರಿರದ ಮತ್ತು ಬೇರೆಯವರಿಗೆ ಸೇರಿದ ಸ್ವತ್ತುಗಳನ್ನು ವಿಲ್ ನಲ್ಲಿ ಸೇರಿಸಲಾಗಿದೆ ಅಂದರೆ ಸರಿಯಲ್ಲ. ವಿಲ್ ನ ಪ್ರಕಾರ ವಾದಿಯರಿಗೆ ಮತ್ತು ನಮಗೆ ಖಾತೆಯಾಗಿರುವುದಿಲ್ಲ ಅಂದರೆ ಯಾರಿಗೆ ವಿಲ್ ಬರೆದುಕೊಡಲಾಗದೆಯೋ ಅವರ ಹೆಸರಿಗೆ ಖಾತೆ ಆಗಿದೆ ಅಂತ ನುಡಿಯುತ್ತಾರೆ. ಆ ರೀತಿಯಾಗಿ ಖಾತೆ ಆಗಿರುವ ಬಗ್ಗೆ ದಾಖಲೆಗಳನ್ನು ಹಾಜರುಪಡಿಸಿದ್ದೀರಾ ಎಂದರೆ ನಮಗೆ ಖಾತೆ ಆಗಿರುವ ಜಮೀನುಗಳ

ದಾಖಲೆಗಳನ್ನು ಹಾಜರುಪಡಿಸಿರುತ್ತೇವೆ ಅಂತ ನುಡಿಯುತ್ತಾರೆ. ವಿಲ್ ನಲ್ಲಿರುವ ಜಮೀನುಗಳು ಬೋಗಪ್ಪನ ನ ಹೆಸರಿನಲ್ಲಿ ಇರದ ಕಾರಣ ಅವರಿಗೆ ವಿಲ್ ಮಾಡುವ ಹಕ್ಕು ಅಧಿಕಾರ ಇರಲಿಲ್ಲ ಅಂದರೆ ಸರಿಯಲ್ಲ. ಒಂದು ವೇಳೆ ಅದು ನಿಜವಾದ ವಿಲ್ ಆಗಿದ್ದಲ್ಲಿ ಬೋಗಪ್ಪನ ಹೆಸರಿನಲ್ಲಿದ್ದ ಆಸ್ತಿಗಳನ್ನು ಸೇರಿಸಲಾಗುತ್ತಿತ್ತು, ಆಗಾಗಿ ಆತನ ಹೆಸರಿನಲ್ಲಿರುವ ಆಸ್ತಿಗಳನ್ನು ಸೇರಿಸಿರುವುದಿಲ್ಲ ಅಂದರೆ ಸರಿಯಲ್ಲ. ವಿಲ್ ಬರೆದರು ಎಂದು ಹೇಳಲಾದ ದಿನಾಂಕದಂದು ಬೋಗಪ್ಪನವರು ಹೊಸದುರ್ಗ ಪಟ್ಟಣಕ್ಕೆ ಬರುವ ಸ್ಥಿತಿಯಲ್ಲಿ ಇರಲಿಲ್ಲ ಅಂದರೆ ಸರಿಯಲ್ಲ. ವಾದಿಯರಿಗೆ ಮೋಸ ಮಾಡಲು ವಿಲ್ ನ್ನು ಸೃಷ್ಟಿಸಿರುತ್ತೇವೆ ಅಂದರೆ ಸರಿಯಲ್ಲ. ವಿಲ್ ನಲ್ಲಿರುವ ವಿಚಾರಗಳನ್ನು ಬರೆಯಲು ಬೋಗಪ್ಪನವರು ಮಾಹಿತಿ ನೀಡಿರುವುದಿಲ್ಲ ಮತ್ತು ಮಾಹಿತಿ ನೀಡುವ ಸ್ಥಿತಿಯಲ್ಲಿ ಇರಲಿಲ್ಲ ಅಂದರೆ ಸರಿಯಲ್ಲ.

ಈ ಹಂತದಲ್ಲಿ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದು,

ಕೋರಿಕೆಯ ಮೇರೆಗೆ ಪಾಟೀ ಸವಾಲನ್ನು ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚುಪಡಿಸಿದೆ)

ಓ.ಹೇ.ಕೇ.ಸ.ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಹೊಸದುರ್ಗ